ಕಬ್ಬಿನ ಬೆಲೆ ನಿಗದಿ ಬಗ್ಗೆ

3125 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ಸರ್ಕಾರ ಕಬ್ಬಿಗೆ ನಿಗದಿಪಡಿಸಿರುವ ಹಣವೆಷ್ಟು?

ಆ) ಸಕ್ಕರೆ ಕಾರ್ಖಾನೆಗಳು ಇದುವರೆಗೂ ರೈತರಿಗೆ ಬಾಕಿ ಪಾವತಿಸದೆ ಇರುವ ಪ್ರಕರಣಗಳ ಸಂಖ್ಯೆ ಎಷ್ಟು?

ಇ) ಬಾಕಿ ಪಾವತಿ ಮಾಡದೇ ಇರುವ ಕಾರ್ಖಾನೆಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಕೆಲವೊಂದು ಸಕ್ಕರೆ ಕಾರ್ಖಾನೆಯ ಮಾಲೀಕರು ರಾಜ್ಯ ಸರ್ಕಾರವು ಕಬ್ಬಿನ ಬೆಲೆ ನಿಗದಿಪಡಿಸುವ ಸಂಬಂಧ ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದುದರಿಂದಾಗಿ 97-98ರಿಂದ ರಾಜ್ಯ ಸರ್ಕಾರವು ಕಬ್ಬಿಗೆ ಬೆಲೆ ನಿಗದಿಪಡಿಸುತ್ತಿಲ್ಲ. ಬದಲಾಗಿ ಕಾರ್ಖಾನೆಗಳು ಮತ್ತು ರೈತರು ಪರಸ್ಪರ ಒಪ್ಪಂದದ ಮೇರೆಗೆ ಬೆಲೆ ನಿಗದಿಪಡಿಸಿಕೊಳ್ಳುತ್ತಿದ್ದಾರೆ.

ಆ) ಮತ್ತು ಇ) ದಿನಾಂಕ : 15-8-2000 ದಂದು ಇದ್ದಂತೆ ಕಬ್ಬು ಬೆಲೆ ಬಾಕಿ ಉಳಿಸಿಕೊಂಡಿರುವ ಸಕ್ಕರೆ ಕಾರ್ಖಾನೆಗಳ ಪಟ್ಟಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ. ಸಕ್ಕರೆ ಕಾರ್ಖಾನೆಗಳು ರೈತರಿಗೆ ಕಬ್ಬಿನ ಬೆಲೆ ಬಾಕಿ ತೀರುವಳಿ ಮಾಡಲು ತಮ್ಮಲ್ಲಿರುವ ಸಕ್ಕರೆ ಮಾರಾಟ ಮಾಡಬೇಕಾಗಿರುತ್ತದೆ. ಸಕ್ಕರೆ ಬಿಡುಗಡೆಯಾದಂತೆ ಕಬ್ಬಿನ ಬೆಲೆ ತೀರುವಳಿಯ ಪ್ರಕ್ರಿಯೆ ನಿರಂತರವಾಗಿ ನಡೆದಿರುತ್ತದೆ. ಕೆಲವೊಂದು ವಿಶಿಷ್ಟ ಸನ್ನಿವೇಶಗಳಲ್ಲಿ ಮಾತ್ರ ಈ ಪ್ರಕ್ರಿಯೆಗೆ ತಡೆಯುಂಟಾಗಿ ಅಲ್ಪಕಾಲಾವಧಿಗೆ ಬಾಕಿ ಉಳಿಯುವ ಸಾಧ್ಯತೆ ಇರುತ್ತದೆ. ಹೆಚ್ಚಿನ ಸಂಖ್ಯೆಯ ಸಕ್ಕರೆ ಕಾರ್ಖಾನೆಗಳು ಅಲ್ಪ ಕಾಲದವರೆಗೆ ಬಾಕಿ ಉಳಿಸಿಕೊಂಡಿರುವುದು ಕಂಡು ಬರುತ್ತದೆ. ಕೆಲವೊಂದು ಕಾರ್ಖಾನೆಗಳಲ್ಲಿ ಹೆಚ್ಚಿನ ಅವಧಿಗೆ ಬಾಕಿ ಇರುವುದು ಕೂಡಾ ಕಂಡು ಬರುತ್ತಿದೆ. ಸಕ್ಕರೆ ಮಾರಾಟವಾದಂತೆ ಈ ಬಾಕಿ ತೀರುವಳಿಯಾಗುತ್ತಿರುತ್ತದೆ. ಹಾಗೂ ಹೊಸದಾಗಿ ಕಬ್ಬು ಸರಬರಾಜು ಮಾಡಿದಂತೆಲ್ಲಾ ಬಾಕಿ ಪುನಃ ಸೇರಿಕೊಳ್ಳುತ್ತಿರುತ್ತದೆ. ಈ ಪ್ರಕ್ರಿಯೆ ಹೊರತುಪಡಿಸಿ ಇನ್ನಾವುದೇ ಕಾರಣಕ್ಕೆ ಕಬ್ಬಿನ ಬೆಲೆ ಬಾಕಿ ಉಳಿದುಕೊಂಡಿದ್ದರೆ ಅಂತಹ ಕಾರ್ಖಾನೆಗಳನ್ನು ಗುರುತಿಸಿ, ಕೂಡಲೇ ಬಾಕಿ ತೀರುವಳಿ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುತ್ತಿದೆ.

ಅನುಬಂಧ

Cane Price Arrears as on 15-08-2000

(Rs. in lakhs)

Sl. No.	Name of the Sugar factory	Previous season	Current season
Coop - Sector :			
1.	Bhadra	nil	355.50
2.	Bhagyalakshmi	384.14	nil
3.	Bidar	115.02	nil
4.	Dakshina Kannada	31.91	nil
5.	Doodhganga krishna	nil	nil
6.	Ghataprabha	285.96(97-98)	nil
7.	Halasiddanatha	nil	nil
8.	Hemavathy	nil	nil
9.	Hiranyakeshi	nil	nil
10.	Karnataka	nil	nil
11.	Malaprabha	nil	318.05
12.	Nandi	nil	nil
13.	Pandavapura	nil	nil
14.	Raibag	1131.25	837.32
15.	SSK Aland	330.98 (94-95)	510.00
16.	Sri. Srirama		390.00
17.	Vanivilasa	nil	607.52
18.	Raithara SSK	nil	318.57
	Total		**3336.46**
Public Sector :			
19.	M.P.M. Sugars	nil	
20.	Mysore Sugar company		407.16
	Total		**407.16**

Sl. No.	Name of the Sugar factory	Previous season	Current season
Joint Sector :			
21.	Davanagere Sugars	nil	134.86
22.	Gangavathi	nil	nil
	Total		**134.86**
Private Sector :			
23.	Bannari Amman sugars	nil	1.04
24.	Chamundeshwari	nil	470.11
25.	Godavari	nil	1490.00
26.	I.S.R.	nil	263.56
27.	Mahadeshwara	nil	124.20
28.	Siruguppa Sugars (Gowri)	nil	329.74
29.	Siruguppa Sugars (Desanur)-	nil	
30.	Sundari Sugars	-	-
31.	Thungabhadra Sugars	-	-
32.	Ugar Sugar Works	3.34	75.00
33.	Shamnur	-	-
34.	Renuka sugars	-	-
35.	Prabhulingeshwara	-	-
		A-2282.61	**B-6640.13**
	Total	**A+B= 8922.74**	

ಮಡಿಕೇರಿಯ ತಲಕಾವೇರಿ ಕ್ಷೇತ್ರದ ಸುಧಾರಣೆ

3126 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಡಿಕೇರಿಯ ತಲಕಾವೇರಿ ಕ್ಷೇತ್ರವು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?